ನಾಡ ಬಾಂಧವರೆ,

ನಿಮಗೆಲ್ಲರಿಗೂ 73ನೇ ಸ್ವಾತಂತ್ರ್ಯ ದಿನಾಚರಣೆಯ ಹೃತ್ಪೂರ್ವಕ ಶುಭಾಶಯಗಳು. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ "Freedom is never dear at any price. It is the breath of life" ಅಂದರೆ ಸ್ವಾತಂತ್ರ್ಯ ನಮಗೆ ಉಸಿರಾಟದಷ್ಟೇ ಅಮೂಲ್ಯವಾದುದು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ 150 ನೇ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದೇಶ ನೀಡುವ ಸುಯೋಗ ನನಗೆ ಒದಗಿ ಬಂದಿರುವುದು ನನ್ನಲ್ಲಿ ಧನ್ಯತೆ ಮೂಡಿಸಿದೆ. ಅವರ ರಾಮರಾಜ್ಯದ ಕನಸನ್ನು ನನಸಾಗಿಸುವತ್ತ ನಾವು ಮುನ್ನಡೆದಿದ್ದೇವೆ. ಅಭಿವೃದ್ಧಿಯೇ ಆಡಳಿತ ಮಂತ್ರ ಎನ್ನುವುದು ನಮ್ಮ ಸರ್ಕಾರದ ಧ್ಯೇಯವಾಗಿದೆ.

ಸ್ವಾತಂತ್ರ್ಯದ ಸಮರದಲ್ಲಿ ಅಸಂಖ್ಯಾತ ದೇಶಭಕ್ತರು ಬಲಿದಾನ ಮಾಡಿದ್ದಾರೆ. ಅವರ ಅಮರ ಬಲಿದಾನದ ಫಲವನ್ನು ನಾವು ನೀವೆಲ್ಲ ಉಣ್ಣುತ್ತಿದ್ದೇವೆ. ಅಪಾರ ತ್ಯಾಗ ಮತ್ತು ಬಲಿದಾನಗಳಿಂದ ಸಂಪಾದಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಹೊಣೆ ನಮ್ಮೆಲ್ಲರದ್ದಾಗಿದೆ. ಈ ದಿಸೆಯಲ್ಲಿ ಸ್ವಾತಂತ್ರ್ಯೋತ್ಸವ ದಿನವಾದ ಇಂದು ನಾವೆಲ್ಲ ದೀಕ್ಷೆ ತೆಗೆದುಕೊಳ್ಳೋಣ.

## ಪ್ರಕೃತಿಯ ಮುನಿಸು – ಪರಿಹಾರಕ್ಕೆ ಆದ್ಯತೆ

ಕರ್ನಾಟಕ ರಾಜ್ಯ ಅತಿವೃಷ್ಟಿ, ಅನಾವೃಷ್ಟಿಗಳ ಅಡಕತ್ತರಿಯಲ್ಲಿ ಸಿಲುಕಿ ತತ್ತರಿಸುತ್ತಿದೆ. ಈ ಎರಡೂ ಪರಿಸ್ಥಿತಿಗಳನ್ನು ಎದುರಿಸಲು ನನ್ನ ಸರ್ಕಾರ ಸನ್ನದ್ಧವಾಗಿದೆ. ಅಧಿಕಾರ ಸ್ವೀಕರಿಸಿದ ಪ್ರಾರಂಭದಲ್ಲೇ ಜಿಲ್ಲಾಧಿಕಾರಿಗಳ ಸಭೆ ಕರೆದು ಆಗ ರಾಜ್ಯದಲ್ಲಿದ್ದ ಬರ ಪರಿಸ್ಥಿತಿಯ ಕುರಿತು ಸಂಪೂರ್ಣ ವಿವರಗಳನ್ನು ಪಡೆದು ಪರಿಸ್ಥಿತಿ ನಿಭಾಯಿಸಲು ಮಾರ್ಗದರ್ಶನ ನೀಡಿದ್ದೇನೆ.

ಕರ್ನಾಟಕ ಕಳೆದ 45 ವರ್ಷಗಳಲ್ಲಿ ಕಂಡರಿಯದ ಪ್ರಕೃತಿ ವಿಕೋಪವನ್ನು ಪ್ರಸ್ತುತ ಎದುರಿಸುತ್ತಿದೆ. ಸುಮಾರು ಅರ್ಧ ರಾಜ್ಯ ಜಲಪ್ರಳಯಕ್ಕೊಳಗಾಗಿದೆ. 22 ಜಿಲ್ಲೆಗಳ

ವ್ಯಾಪ್ತಿಯಲ್ಲಿ 103 ತಾಲ್ಲೂಕುಗಳು ಭೀಕರ ಪ್ರವಾಹಕ್ಕೆ ತುತ್ತಾಗಿವೆ. ಪ್ರವಾಹದ ನಡುವೆ 5 ಜಿಲ್ಲೆಗಳ ಬಹುತೇಕ ಭಾಗದಲ್ಲಿ ಮಳೆಯಾಗದೆ ಬರ ಪರಿಸ್ಥಿತಿ ಉಂಟಾಗಿದೆ. ಅಂದರೆ ನೆರೆಯ ರಾಜ್ಯದ ಅಣೆಕಟ್ಟೆಗಳು ತುಂಬಿ ಹೊರ ಹರಿದ ನೀರಿನ ಜೊತೆಗೆ ನಮ್ಮ ರಾಜ್ಯದಲ್ಲೂ ಬಿದ್ದ ಮಳೆಯಿಂದ ನದಿಗಳು ತುಂಬಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಇದರ ಜೊತೆಗೆ ಮಳೆಯ ಚದುರುವಿಕೆಯಲ್ಲಿ ವ್ಯತ್ಯಾಸವಾಗಿ ಹಲವೆಡೆ ಬರ ಪರಿಸ್ಥಿತಿ ಉಂಟಾಗಿರುವುದು ಗಮನಾರ್ಹ. ಪ್ರವಾಹದಿಂದಾಗಿ ಈವರೆಗೆ 61 ಮಂದಿ ಸಾವನ್ನಪ್ಪಿದ್ದಾರೆ. ಮೃತಪಟ್ಟವರ ಕುಟುಂಬಗಳಿಗೆ 48 ಗಂಟೆಯೊಳಗಾಗಿ ತಲಾ 5 ಲಕ್ಷ ರೂ. ಗಳಂತೆ ಪರಿಹಾರ ನೀಡಲಾಗುತ್ತಿದೆ.

ಈವರೆಗೆ 6,97,948 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. 859 ಜಾನುವಾರುಗಳು ಸಾವನ್ನಪ್ಪಿದ್ದು, 51,460 ಜಾನುವಾರುಗಳನ್ನು ರಕ್ಷಿಸಲಾಗಿದೆ. ರಾಜ್ಯದಲ್ಲಿ ಒಟ್ಟು 1,224 ಪರಿಹಾರ ಕೇಂದ್ರಗಳನ್ನು ತೆರೆದಿದ್ದೇವೆ. ಅದರಲ್ಲಿ ಆಹಾರ, ವಸ್ತ್ರ, ಹೊದಿಕೆ, ಔಷಧ ಮತ್ತಿತರ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಪರಿಹಾರ ಕೇಂದ್ರಗಳಲ್ಲಿ 3,96,617 ಜನರು ಆಶ್ರಯ ಪಡೆದಿದ್ದಾರೆ.

ದಿಢೀರ್ ನುಗ್ಗಿದ ಪ್ರವಾಹದ ನೀರು ತಂದೊಡ್ಡಿರುವ ಸಮಸ್ಯೆ ಮತ್ತು ಸವಾಲುಗಳು ಹಲವಾರು. ಕೃಷಿಕರು ಹೆಚ್ಚಿನ ತೊಂದರೆಗೆ ಈಡಾಗಿದ್ದಾರೆ. ಸುಮಾರು 4.69 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಪ್ರವಾಹ ಹಾಗೂ ಭೂ ಕುಸಿತದಿಂದ ಹಾನಿ ಸಂಭವಿಸಿದೆ. 58,620 ಮನೆಗಳಿಗೆ ಹಾನಿಯಾಗಿದೆ. ಸಾವಿರಾರು ಜನ ಮನೆ–ಮಠ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಪ್ರವಾಹ ಪರಿಸ್ಥಿತಿ ಎದುರಾದ ಕೂಡಲೇ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ನಿರಂತರ ವೈಮಾನಿಕ ಸಮೀಕ್ಷೆ ಹಾಗೂ ಸ್ಥಳ ಪರೀಕ್ಷೆಗಳನ್ನು ಮಾಡಿ ಸಂತ್ರಸ್ತರಿಗೆ ತಡವಿಲ್ಲದೆ ಪರಿಹಾರ ಒದಗಿಸಲು ಪ್ರಯತ್ನಸಿದ್ದೇನೆ. **ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಯಾದಗಿರಿ, ದಕ್ಷಿಣ ಕನ್ನಡ, ಶಿವಮೊಗ್ಗ, ಮೈಸೂರು ಮತ್ತು ಗದಗ** ಜಿಲ್ಲೆಗಳಲ್ಲಿ ವ್ಯಾಪಕವಾಗಿ ಸಂಚರಿಸಿ ಸಂತ್ರಸ್ತರ ರಕ್ಷಣೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಂಡಿದ್ದೇನೆ.

ನಮ್ಮ ಅಧಿಕಾರಿಗಳು, ಶಾಸಕರು, ಸಂಸದರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಮಾನವಿಯ ಕಾಳಜಿಯುಳ್ಳ ಜನ ಆಪತ್ಬಾಂಧವರಂತೆ ನೆರವು ನೀಡಿ

ಸಂತ್ರಸ್ತರನ್ನು ಕಾಪಾಡಿದ್ದಾರೆ. ವಿರೋಧ ಪಕ್ಷಗಳ ನಾಯಕರು ಕೂಡ ಪರಿಹಾರ ಕ್ರಮಗಳ ಬಗ್ಗೆ ಸಮಾಧಾನ ವ್ಯಕ್ತಪಡಿಸಿ ಸಹಕರಿಸಿದ್ದಾರೆ.

ಪ್ರವಾಹ ಸಂತ್ರಸ್ತರಿಗೆ ತಕ್ಷಣದ ನೆರವಿಗೆ 10,000 ರೂಪಾಯಿ, ಮನೆ ಸಂಪೂರ್ಣವಾಗಿ ಕಳೆದುಕೊಂಡವರಿಗೆ 5 ಲಕ್ಷ ರೂಪಾಯಿ ಪರಿಹಾರ ಹಾಗೂ ಮನೆ ದುರಸ್ತಿ ಮಾಡಿಕೊಳ್ಳಲು 1 ಲಕ್ಷ ರೂ. ನೆರವು ನೀಡುವುದಾಗಿ ಘೋಷಣೆ ಮಾಡಿದ್ದೇನೆ.

ಪ್ರವಾಹದಿಂದ ನಗರ ಪ್ರದೇಶದ ಕೊಳೆಗೇರಿಗಳಲ್ಲಿ ಮನೆಗಳಿಗೆ ಹಾಗೂ ಮೂಲಸೌಲಭ್ಯಗಳಿಗೆ ತೀವ್ರ ಹಾನಿಯಾಗಿದ್ದು, ನಿವಾಸಿಗಳ ಬದುಕು ದುಸ್ತರವಾಗಿದೆ. ಆದ್ದರಿಂದ ಕೊಳೆಗೇರಿ ನಿವಾಸಿಗಳಿಗೆ ಮನೆಗಳನ್ನು ನಿರ್ಮಿಸಿ, ರಸ್ತೆ, ಒಳಚರಂಡಿ, ಕುಡಿಯುವ ನೀರು, ಶೌಚಾಲಯ ಮತ್ತಿತರ ಮೂಲಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ.

## ಕೇಂದ್ರದ ನೆರವು

ದೆಹಲಿಗೆ ಭೇಟಿ ನೀಡಿ ಕೇಂದ್ರ ಸರ್ಕಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಇತರ ಸಚಿವರನ್ನು ಕಂಡು ರಾಜ್ಯಕ್ಕೆ ಅಗತ್ಯ ನೆರವು ಒದಗಿಸುವಂತೆ ಮನವಿ ಮಾಡಿದ್ದೇನೆ. ಕೇಂದ್ರ ಸರ್ಕಾರ ತಕ್ಷಣ ಸೇನೆ ಮತ್ತು ಎನ್‌ಡಿಆರ್‌ಎಫ್ ಪಡೆಗಳನ್ನು ಒದಗಿಸಿದ್ದಲ್ಲದೇ ಅಗತ್ಯವಾದ ಸೇನಾ ಹೆಲಿಕಾಪ್ಟರ್ ಮತ್ತು ರಕ್ಷಣಾ ದೋಣಿಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಿದೆ.

ಖುದ್ದು ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ಗೃಹ ಸಚಿವ ಶ್ರೀ ಅಮಿತ್ ಶಾ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಶ್ರೀ ಡಿ.ವಿ. ಸದಾನಂದ ಗೌಡ, ಕಲ್ಲಿದ್ದಲು ಸಚಿವ ಶ್ರೀ ಪ್ರಲ್ಹಾದ ಜೋಷಿ, ರೈಲ್ವೆ ಖಾತೆ ರಾಜ್ಯ ಸಚಿವ ಶ್ರೀ ಸುರೇಶ್ ಅಂಗಡಿ ಮತ್ತು ಸಂಸದರು ಕೂಡ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿರುವುದಲ್ಲದೆ, ಕೇಂದ್ರದಿಂದ ಹೆಚ್ಚಿನ ನೆರವು ಒದಗಿಸಿಕೊಡುವ ಭರವಸೆ ನೀಡಿದ್ದಾರೆ.

ಪ್ರಕೃತಿ ವಿಕೋಪದಿಂದ ಹಲವು ಸಹಸ್ರ ಕೋಟಿ ರೂ.ಗಳ ಮೌಲ್ಯದ ಆಸ್ತಿಪಾಸ್ತಿಗೆ ಹಾನಿಯಾಗಿದೆ. ಪ್ರವಾಹ, ಮಳೆ ಮತ್ತು ಭೂಕುಸಿತದಿಂದ ಹಾನಿಗೊಳಗಾಗಿರುವ ಮನೆಗಳನ್ನು ಅಗತ್ಯವಿದ್ದರೆ ದುರಸ್ತಿ ಇಲ್ಲವೇ ಪುನರ್ನಿರ್ಮಾಣಕ್ಕೆ ರಾಜ್ಯ ಸರ್ಕಾರ ಎಲ್ಲಾ

ಕ್ರಮ ಕೈಗೊಳ್ಳಲಿದೆ. ಒಟ್ಟಾರೆ ಹಾನಿಯ ಅಂದಾಜು ಮಾಡುತ್ತಿದ್ದು, ಕೇಂದ್ರಕ್ಕೆ ಈಗಾಗಲೇ ಸಲ್ಲಿಸಿರುವ ನೆರವಿನ ಕೋರಿಕೆಯ ಮನವಿಗಳನ್ನು ಇತ್ತೀಚಿನ ಮಾಹಿತಿಯೊಂದಿಗೆ ಇಂದೀಕರಿಸಿ ಹೆಚ್ಚಿನ ನೆರವನ್ನು ಕೋರಲಾಗುವುದು.

ಪರಿಹಾರ ಕ್ರಮಗಳನ್ನು ಚುರುಕುಗೊಳಿಸಲು ಶಾಸಕರು ಹಾಗೂ ಸಂಸದರ ತಂಡಗಳನ್ನು ರಚಿಸಿ, ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸುವಂತೆ ಸೂಚಿಸಿದ್ದೆ. ಅದರಂತೆ ಅವರು ಕ್ರಮ ವಹಿಸಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳ ತಂಡ ತಮಗೆ ವಹಿಸಿರುವ ಜಿಲ್ಲೆಗಳಲ್ಲಿ ರಕ್ಷಣೆ ಹಾಗೂ ಪರಿಹಾರ ಕ್ರಮಗಳ ಉಸ್ತುವಾರಿ ವಹಿಸಿಕೊಂಡಿದೆ. ಜನರ ಸಂಕಷ್ಟಗಳಿಗೆ ತುರ್ತು ಸಂದರ್ಭದಲ್ಲಿ ನೆರವಿಗೆ ಧಾವಿಸಲು ಸರ್ಕಾರ ಯಾವ ಪ್ರಯತ್ನವನ್ನೂ ಕೈಬಿಟ್ಟಿಲ್ಲ ಎಂಬುದನ್ನು ಆತ್ಮಸಾಕ್ಷಿಯಾಗಿ ಹೇಳಬಲ್ಲೆ.

ಕಡಲು ಕೊರೆತದಿಂದ ಕರಾವಳಿ ಭಾಗದ ಹಲವು ಮೀನುಗಾರರು ಮನೆ ಕಳೆದುಕೊಂಡಿದ್ದಾರೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರವೂ ನೆರವಿಗೆ ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಅಂತೆಯೇ ರಾಜ್ಯ ಸರ್ಕಾರವೂ ಕಡಲ ಕೊರೆತದಿಂದ ಸಂಕಷ್ಟಕ್ಕೊಳಗಾದ ಮೀನುಗಾರರಿಗೆ ಒತ್ತಾಸೆಯಾಗಿ ನಿಲ್ಲಲಿದೆ.

## ಅಭಿವೃದ್ಧಿಯ ಪಥದಲ್ಲಿ ಕರ್ನಾಟಕ

ಕರ್ನಾಟಕ ರಾಜ್ಯ ದೇಶದ ಮುಂಚೂಣಿಯ ರಾಜ್ಯಗಳಲ್ಲಿ ಮುಖ್ಯವಾದದ್ದು. 2 ಸಾವಿರ ವರ್ಷಗಳಿಗೂ ಹೆಚ್ಚಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಹಿನ್ನೆಲೆಯುಳ್ಳ ಶ್ರೀಮಂತ ಇತಿಹಾಸದ, ವಿಶಿಷ್ಟ ಸಂಸ್ಕೃತಿಯ ತವರೂರು. ಅಪಾರ ನೈಸರ್ಗಿಕ ಹಾಗೂ ಅಸಾಧಾರಣ ಮಾನವ ಸಂಪನ್ಮೂಲದಿಂದ ತುಂಬಿರುವ ಕರ್ನಾಟಕ ಭಾರತದ ಅಭಿವೃದ್ಧಿ ನಕ್ಷೆಯಲ್ಲಿ ಶಿಖರ ಪ್ರಾಯ ಸ್ಥಾನ ಹೊಂದಿದೆ.

ಅಭಿವೃದ್ಧಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡು, ಸುಭಿಕ್ಷ, ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ನಮ್ಮ ಸರ್ಕಾರ ಕಟಿಬದ್ಧವಾಗಿದೆ. ಅಧಿಕಾರ ಸ್ವೀಕಾರದ ತರುವಾಯ ಮೊದಲ ಸಚಿವ ಸಂಪುಟ ಸಭೆಯಲ್ಲಿ ನಮ್ಮ ಸರ್ಕಾರ ಕೈಗೊಂಡ ನಿರ್ಣಯಗಳೇ ಇದಕ್ಕೆ ಸಾಕ್ಷಿ.

ಇತ್ತೀಚಿಗೆ ರಾಜ್ಯದಲ್ಲಿನ ಉದ್ಯೋಗಗಳಲ್ಲಿ ಕನ್ನಡಿಗರ ಪ್ರಾತಿನಿಧ್ಯ ಕಡಿಮೆಯಾಗುತ್ತಿದೆ ಎಂಬ ಕೂಗೆದ್ದಿದೆ. ರಾಜ್ಯದಲ್ಲಿನ ಉದ್ಯೋಗಗಳಲ್ಲಿ ಅಧಿಕಾಂಶ

ಕನ್ನಡಿಗರಿಗೇ ದೊರೆಯಬೇಕೆಂಬುದು ನಮ್ಮ ನಿಲುವು. ನಮ್ಮ ಸರ್ಕಾರದ ನೀತಿಯೂ ಇದೇ ಆಗಿದೆ. ಈ ನೆಲದ ಭಾವನೆಗಳನ್ನು ನಮ್ಮ ಸರ್ಕಾರ ಗೌರವಿಸುತ್ತದೆ. ಕನ್ನಡಿಗರ ಸ್ವಾಭಿಮಾನ, ಗೌರವ ಮತ್ತು ಉದ್ಯೋಗಾವಕಾಶಗಳಿಗೆ ಧಕ್ಕೆ ಬರದಂತೆ ಎಚ್ಚರವಹಿಸಲು ನಾವು ಬದ್ಧರಿದ್ದೇವೆ ಎಂದು ಈ ಸಂದರ್ಭದಲ್ಲಿ ಘೋಷಿಸಬಯಸುತ್ತೇನೆ. ಜೊತೆಗೆ ಒಕ್ಕೂಟ ತತ್ವದಡಿ ಇತರರಿಗೂ ಅವಕಾಶಗಳನ್ನು ಕಲ್ಪಿಸಲು ನಾವು ಸಿದ್ಧರಿದ್ದೇವೆ.

## ಮಾದರಿ ಕನ್ನಡಿಗರು

ಪರರಾಜ್ಯಗಳಿಂದ ಮತ್ತು ಹೊರದೇಶಗಳಿಂದ ಬಂದು ಕರ್ನಾಟಕದಲ್ಲಿ ನೆಲೆಗೊಂಡಿರುವ ಜನ ಇಲ್ಲಿನ ಭಾಷೆ, ಸಂಸ್ಕೃತಿ ಮತ್ತು ಜೀವನ ವಿಧಾನಗಳಿಗೆ ಹೊಂದಿಕೊಂಡು ಕನ್ನಡತನವನ್ನು ಗೌರವಿಸುವುದಲ್ಲದೇ ತಮ್ಮತನವನ್ನು ಉಳಿಸಿಕೊಳ್ಳಿ ಎಂದು ಕರೆ ನೀಡುತ್ತೇನೆ. ಈ ವಿಚಾರದಲ್ಲಿ ಕನ್ನಡಿಗರು ಇತರರಿಗೆ ಮಾದರಿಯಾಗಿದ್ದಾರೆ. ಕನ್ನಡಿಗರು ನಿಂತ ನೆಲ ಮತ್ತು ಅಲ್ಲಿನ ಜನರ ಜೊತೆ ಹೊಂದಿಕೊಂಡು ಬಾಳುತ್ತಿದ್ದಾರೆ. ಇದು ಎಲ್ಲರಿಗೂ ಅನುಕರಣೀಯ ಮಾದರಿಯಾಗಿದೆ.

**ಬಂಧುಗಳೆ,**

## ಅನ್ನದಾತನ ಹಿತರಕ್ಷಣೆಗೆ ಮೊದಲ ಆದ್ಯತೆ

ಅನ್ನದಾತ ರೈತರ ಹಿತ ರಕ್ಷಣೆ ನಮ್ಮ ಸರ್ಕಾರದ ಮೊದಲ ಆದ್ಯತೆ. ಅತಿವೃಷ್ಟಿ, ಅನಾವೃಷ್ಟಿ, ಮಾರುಕಟ್ಟೆ ಸಮಸ್ಯೆ ಮತ್ತಿತರ ಪ್ರತಿಕೂಲ ಪರಿಸ್ಥಿತಿಗಳಿಂದಾಗಿ ಕಂಗಾಲಾಗಿರುವ ರೈತರಲ್ಲಿ ನವ ಚೈತನ್ಯ ತುಂಬುವ ಆಶಯ ನನ್ನ ಸರ್ಕಾರದ್ದು.

ಇದಕ್ಕಾಗಿಯೇ ನಾನು ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ವಾರ್ಷಿಕ ನೆರವು 6 ಸಾವಿರ ರೂ. ಗಳೊಂದಿಗೆ ರಾಜ್ಯ ಸರ್ಕಾರವೂ ಹೆಚ್ಚುವರಿಯಾಗಿ 4 ಸಾವಿರ ರೂ. ಗಳನ್ನು ಎರಡು ಕಂತಿನಲ್ಲಿ ಒದಗಿಸುವ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದೆನು.

ಅಲ್ಲದೆ, ಇದರ ಫಲ ಅವರಿಗೆ ಕೂಡಲೇ ತಲುಪಿಸುವ ನಿಟ್ಟಿನಲ್ಲಿ ತೀರ್ಮಾನಗಳನ್ನು ಕೈಗೊಂಡು, ಮೊದಲ ಕಂತಿನಲ್ಲಿ ತಲಾ 2,000 ರೂ. ಗಳನ್ನು ಒಂದು ಲಕ್ಷ ಅರ್ಹ ಫಲಾನುಭವಿಗಳ ಖಾತೆಗೆ ನೇರ ವರ್ಗಾವಣೆ ಮಾಡಲಾಗಿದೆ. ರೈತರು

ಬೆಳೆಯುವ ಹಸಿರು ಮೇವನ್ನು ಸರ್ಕಾರ ಕೊಳ್ಳುತ್ತಿದೆ. ಆ ದರವನ್ನು ಟನ್‌ಗೆ 3 ಸಾವಿರ ರೂ.ಗಳಿಂದ 4 ಸಾವಿರ ರೂ.ಗಳಿಗೆ ಹೆಚ್ಚಿಸಲಾಗಿದೆ.

## ನೇಕಾರರ ಮತ್ತು ಮೀನುಗಾರರ ಸಾಲ ಮನ್ನಾ

ಅಂತೆಯೇ ಸಂಕಷ್ಟದಲ್ಲಿರುವ ನೇಕಾರರ ಮತ್ತು ಮೀನುಗಾರರ ಸಾಲ ಮನ್ನಾ ಮಾಡುವ ಮೂಲಕ ಅವರ ಬದುಕಿನಲ್ಲಿ ಸಂಕಷ್ಟವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದೇನೆ.

ನೇಕಾರರು ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಲು ದುಡಿಮೆ ಬಂಡವಾಳದ ಕೊರತೆ ಇತ್ತು. ಜೊತೆಗೆ ಮಾರುಕಟ್ಟೆಯ ಸಮಸ್ಯೆಯಿಂದಾಗಿ ಸಂಕಷ್ಟದಲ್ಲಿದ್ದರು. ಅವರು ನೇಕಾರಿಕೆ ಚಟುವಟಿಕೆ ಮುಂದುವರಿಸಿ, ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸರ್ಕಾರವು ಇವರಿಗೆ ಸಹಾಯ ಹಸ್ತ ನೀಡುವುದು ಅಗತ್ಯವೆಂದು ಭಾವಿಸಿ, ಸಹಕಾರಿ ಬ್ಯಾಂಕ್ ಮತ್ತು ಸಹಕಾರ ಸಂಘಗಳಿಂದ ಪಡೆದ 1 ಲಕ್ಷ ರೂ. ವರೆಗಿನ ಸಾಲ ಮನ್ನಾ ಮಾಡಲಾಗಿದೆ. ಇದಕ್ಕೆ 98.29 ಕೋಟಿ ರೂ. ವೆಚ್ಚವಾಗಲಿದ್ದು, 29,621 ನೇಕಾರರಿಗೆ ಅನುಕೂಲವಾಗಲಿದೆ.

ಕರಾವಳಿಯ 3 ಜಿಲ್ಲೆಗಳಲ್ಲಿ ರೈತರ ಸಾಲ ಮನ್ನಾ ಮಾದರಿಯಲ್ಲಿ ಮೀನುಗಾರರ ಸಾಲ ಮನ್ನಾ ಮಾಡಿದಲ್ಲಿ ಅವರು ಆರ್ಥಿಕ ಸಂಕಷ್ಟವನ್ನು ಮೀರಿ ತಮ್ಮ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ಅರಿತು ಮೀನುಗಾರರು ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಶೇ. 2ರ ಬಡ್ಡಿ ದರದಲ್ಲಿ ಪಡೆದಿರುವ 50 ಸಾವಿರ ರೂ. ವರೆಗಿನ ಸಾಲ ಮನ್ನಾ ಮಾಡಲು ಆದೇಶ ಹೊರಡಿಸಲಾಗಿದೆ. ಇದಕ್ಕೆ 60.58 ಕೋಟಿ ರೂ. ವೆಚ್ಚವಾಗಲಿದ್ದು, 23,507 ಮೀನುಗಾರರು, ಅದರಲ್ಲೂ ಬಹುಪಾಲು ಮೀನುಗಾರ ಮಹಿಳೆಯರು ಸಾಲದ ಶೂಲದಿಂದ ಮುಕ್ತಿ ಪಡೆಯಲಿದ್ದಾರೆ.

## ಜನ ಹಿತಕ್ಕಾಗಿ ಸರ್ಕಾರ

'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬಂತೆ ಜನರ ಹಿತಕ್ಕಾಗಿ, ಸಮೃದ್ಧಿ, ಶಾಂತಿಗಾಗಿ ನಮ್ಮ ಸರ್ಕಾರ ಶ್ರಮಿಸಲಿದೆ. ನಮ್ಮ ಸರ್ಕಾರದ ಧ್ಯೇಯ ರಾಜ್ಯದ ಸರ್ವತೋಮುಖ ಅಭಿವೃದ್ಧಿ.

ರಾಜ್ಯದ ಒಟ್ಟಾರೆ ಕೃಷಿ ಭೂಮಿಯಲ್ಲಿ ಕೇವಲ ಶೇ. 32.3 ರಷ್ಟು ಮಾತ್ರ ನೀರಾವರಿ ಸೌಲಭ್ಯ ಹೊಂದಿದೆ. ಆದ್ದರಿಂದ ಹೆಚ್ಚು ಹೆಚ್ಚು ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಪ್ರಾಮುಖ್ಯತೆ ನೀಡಲಿದೆ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ತೋಟಗಾರಿಕೆಯ ವಲಯವೂ ಸಹ ರಾಜ್ಯದ ರೈತರಿಗೆ ಉತ್ತಮ ಆದಾಯ ಒದಗಿಸುತ್ತಿದೆ. ರಾಜ್ಯದ ಕೃಷಿ ಆದಾಯದ ಶೇ. 32.45 ರಷ್ಟು ಕೊಡುಗೆ ತೋಟಗಾರಿಕೆಯದ್ದಾಗಿದೆ. ಅಲ್ಲದೆ ತೋಟಗಾರಿಕೆಯ ಉತ್ಪನ್ನಗಳ ರಫ್ತಿನಲ್ಲಿಯೂ ರಾಜ್ಯ ಮುಂಚೂಣಿಯಲ್ಲಿದೆ. ಇದನ್ನು ಇನ್ನಷ್ಟು ವ್ಯವಸ್ಥಿತವಾಗಿ ನಡೆಸಲು ರೈತರಿಗೆ ನೆರವಾಗಲು ರಾಜ್ಯ ಸರ್ಕಾರ ಎಲ್ಲ ಅಗತ್ಯ ಕ್ರಮ ಕೈಗೊಳ್ಳಲಿದೆ.

ಸನ್ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ, ರೈತರ ಆದಾಯ ದ್ವಿಗುಣಗೊಳಿಸುವ ಕನಸನ್ನು ಸಾಕಾರಗೊಳಿಸಲು ರಾಜ್ಯ ಸರ್ಕಾರವು ರೈತರಿಗೆ ಎಲ್ಲ ಅಗತ್ಯ ಬೆಂಬಲ, ಮಾರ್ಗದರ್ಶನ ನೀಡಲಿದೆ.

ಸಹಕಾರ ವಲಯ ಕೃಷಿ ಆರ್ಥಿಕತೆಯ ಬೆನ್ನೆಲುಬು ಇದ್ದಂತೆ. ಆದ್ದರಿಂದ ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ. ಕೃಷಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ, ಬೆಳೆಗೆ ಉತ್ತಮ ಬೆಲೆ ನೀಡಲು, ಮಧ್ಯವರ್ತಿಗಳ ಹಾವಳಿ ತಪ್ಪಿಸಲು, ರೂಪಿಸಲಾಗಿರುವ ಆನ್‌ಲೈನ್ ಮಾರಾಟ ವೇದಿಕೆಯನ್ನು ಇನ್ನಷ್ಟು ಬಲಪಡಿಸಲಾಗುವುದು.

ರೈತರಿಗೆ ವ್ಯವಸ್ಥಿತ ಹಾಗೂ ವೈಜ್ಞಾನಿಕ ಗೋದಾಮು ಸೌಲಭ್ಯ, ಬೆಲೆ ಕುಸಿತದ ಸಂದರ್ಭದಲ್ಲಿ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ (ಬೆಂಬಲ ಬೆಲೆ ಘೋಷಣೆ, ಸಕಾಲದಲ್ಲಿ ಖರೀದಿ ಕೇಂದ್ರ ತೆರೆಯುವುದು ಇತ್ಯಾದಿ) ರೈತರ ಹಿತ ಕಾಪಾಡಲು ನಮ್ಮ ಸರ್ಕಾರ ಬದ್ಧವಾಗಿದೆ.

ಅಂತೆಯೇ ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರು, ತ್ಯಾಜ್ಯ ವಿಲೇವಾರಿ ಮತ್ತು ಇತರ ಮೂಲಸೌಕರ್ಯಗಳನ್ನು ಕಲ್ಪಿಸಲು ಸಹ ಆದ್ಯತೆ ನೀಡಲಾಗುವುದು.

ಇಂದು ನಗರೀಕರಣ ವ್ಯಾಪಕವಾಗಿದೆ. ಉದ್ಯೋಗಕ್ಕಾಗಿ ಮತ್ತು ಇತರ ಕಾರಣಗಳಿಗಾಗಿ ನಗರ ಪ್ರದೇಶಗಳಿಗೆ ವಲಸೆ ಬರುವವರ ಸಂಖ್ಯೆ ಹೆಚ್ಚಾಗುತ್ತಿರುವ

ಹಿನ್ನೆಲೆಯಲ್ಲಿ ನಗರ ಪ್ರದೇಶಗಳಿಗೆ ಸೂಕ್ತ ಮೂಲಸೌಕರ್ಯ ಒದಗಿಸುವ ಮೂಲಕ, ನಗರ ಪ್ರದೇಶಗಳ ಬೆಳವಣಿಗೆಯನ್ನು ವ್ಯವಸ್ಥಿತವಾಗಿ ನಿಯಂತ್ರಿಸುವುದು ಅತಿ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಬೆಂಗಳೂರು ನಗರವೂ ಸೇರಿದಂತೆ ರಾಜ್ಯದ ಎಲ್ಲಾ ಪ್ರಮುಖ ನಗರಗಳ ಮೂಲಸೌಕರ್ಯ ಅಭಿವೃದ್ಧಿ ಮತ್ತು ನಿರ್ವಹಣೆಗೆ ವ್ಯವಸ್ಥಿತ ರೂಪ ನೀಡಲಿದೆ.

## ಕೈಗಾರಿಕೆಗಳ ಉತ್ತೇಜನ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ

ದುಡಿಯುವ ಕೈಗಳಿಗೆ ಉದ್ಯೋಗ ನೀಡುವುದು ನಮ್ಮ ಆದ್ಯತೆಗಳಲ್ಲಿ ಒಂದು. ಈ ನಿಟ್ಟಿನಲ್ಲಿ ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಯುವಕರಿಗೆ ಉತ್ತಮ ಉದ್ಯೋಗಾವಕಾಶ ಕಲ್ಪಿಸುವ ಜೊತೆಗೆ ಕೈಗಾರಿಕೋದ್ಯಮಗಳ ಅಗತ್ಯತೆಗೆ ಪೂರಕವಾದ ಮಾನವ ಸಂಪನ್ಮೂಲವನ್ನು ಸ್ಥಳೀಯವಾಗಿ ಸೃಜಿಸಲು ಆದ್ಯತೆ ನೀಡಲಾಗುವುದು.

ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರವು ಮುಂಚೂಣಿಯಲ್ಲಿದೆ. ಭಾರತ ಸರ್ಕಾರವು ನಿಗದಿಪಡಿಸಿರುವ ಈಸ್ ಆಫ್ ಡೂಯಿಂಗ್ ಬಿಸಿನೆಸ್‌ನ ಗುರಿಗಳಲ್ಲಿ ಶೇ. 98ಕ್ಕೂ ಹೆಚ್ಚು ಸಾಧನೆ ಮಾಡಲಾಗಿದೆ. ಮುಂಬರುವ ದಿನಗಳಲ್ಲಿ ಶೇ. 100 ರ ಗುರಿ ಸಾಧನೆ ಮಾಡುವ ಮೂಲಕ ಹೂಡಿಕೆದಾರರನ್ನು ಆಕರ್ಷಿಸಲು ಪೂರಕ ವಾತಾವರಣ ಸೃಷ್ಟಿಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ 2014-19ರ ಕೈಗಾರಿಕಾ ನೀತಿಯ ಅವಧಿಯು ಸೆಪ್ಟೆಂಬರ್ 2019ಕ್ಕೆ ಅಂತ್ಯಗೊಳ್ಳಿದ್ದು, ರಾಜ್ಯದ ಸಮಗ್ರ ಕೈಗಾರಿಕಾ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು, ವಿಶೇಷವಾಗಿ ಹಿಂದುಳಿದ ಪ್ರದೇಶಗಳು ಮತ್ತು 2 ಹಾಗೂ 3ನೇ ಹಂತದ ಕೇಂದ್ರಗಳಿಗೆ ಬಂಡವಾಳ ಆಕರ್ಷಿಸುವ ಮತ್ತು ವಿನೂತನ ತಂತ್ರಜ್ಞಾನಗಳು ಹಾಗೂ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅವಕಾಶವಿರುವ ವಲಯಗಳಿಗೆ ಆದ್ಯತೆ ನೀಡಿ, ನೂತನ ಕೈಗಾರಿಕಾ ನೀತಿಯನ್ನು ರೂಪಿಸಲಾಗುವುದು.

ರಾಜ್ಯದ ಕೈಗಾರಿಕಾ ಉತ್ಪಾದನಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯವಿರುವ ಪುಷ್ಟಿ ನೀಡಲು ಹಾಲಿ 9 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ "ಉತ್ಪನ್ನ ಆಧಾರಿತ ಕೈಗಾರಿಕಾ ಕ್ಲಸ್ಟರ್ ಅಭಿವೃದ್ಧಿ ಯೋಜನೆ" ಯನ್ನು ಮುಂದಿನ ದಿನಗಳಲ್ಲಿ ಆಯಾ ಪ್ರದೇಶದ ಸಂಪನ್ಮೂಲ ಮತ್ತು ವೃತ್ತಿ ಕೌಶಲ್ಯವನ್ನು ಆಧರಿಸಿ ಇತರ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು.

ಭಾರತ ದೇಶದಲ್ಲೇ ಮೊದಲ ಜವಳಿ ನೀತಿಯನ್ನು ರಾಜ್ಯವು 2008 ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಘೋಷಿಸಲಾಗಿತ್ತು. ಇಲ್ಲಿಯವರೆಗೆ ಎರಡು ಜವಳಿ ನೀತಿಗಳನ್ನು ಜಾರಿಗೊಳಿಸಲಾಗಿದೆ. ರಾಜ್ಯ ಸರ್ಕಾರವು 2019–24ರ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯನ್ನು ಈ ಸಾಲಿನಲ್ಲಿ ಜಾರಿಗೊಳಿಸಲಿದೆ.

## ಪ್ರವಾಸೋದ್ಯಮಕ್ಕೆ ಉತ್ತೇಜನ

ಪ್ರವಾಸೋದ್ಯಮ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಾವಿರಾರು ಉದ್ಯೋಗ ಸೃಷ್ಟಿ ಮಾಡುವ ಪ್ರಮುಖ ವಲಯವಾಗಿದೆ. ಸಾವಿರಾರು ವರ್ಷಗಳ ಇತಿಹಾಸ, ಪರಂಪರೆ ಹೊಂದಿರುವ ನಮ್ಮ ಪ್ರವಾಸಿ ತಾಣಗಳನ್ನು ಜನಾಕರ್ಷಕವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಸುಧಾಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಪ್ರವಾಸೋದ್ಯಮ ಕಾರ್ಯಪಡೆ ರಚಿಸಿದ್ದೇವೆ. ಮುಂದಿನ ದಿನಗಳಲ್ಲಿ ಸುಸ್ಥಿರ, ರಚನಾತ್ಮಕ ಪ್ರವಾಸೋದ್ಯಮ ಅಭಿವೃದ್ಧಿಗೆ ನಮ್ಮ ಸರ್ಕಾರ ಆದ್ಯತೆ ನೀಡಲಿದೆ.

ಬೆಂಗಳೂರನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು **"ಬೆಂಗಳೂರು ಅಭಿವೃದ್ಧಿ ಕಾರ್ಯಪಡೆ"**ಯನ್ನು ಬಲಪಡಿಸಲಾಗುವುದು. ನಿಜವಾದ ಅರ್ಥದಲ್ಲಿ ಬೆಂಗಳೂರನ್ನು ಭಾರತದ ಖಟಛಿಟ ತಿಚಿಟಟಜಖ ಮಾಡುವುದು ನನ್ನ ಉದ್ದೇಶ. ಅಚಿಟುಜಿಡಿಟಿಚಿ ಮತ್ತು ಖಚಿಟ ಈಡಿಚಿಟಿಛಿಛಿಂ ಖಟಛಿಟ ಗಿಚಿಟಟಜಖ ಗಳಂತೆ ನಮ್ಮ ಬೆಂಗಳೂರು ಅಭಿವೃದ್ಧಿಯಾಗಬೇಕು.

## ಮಾಹಿತಿ ತಂತ್ರಜ್ಞಾನ ಕ್ಷೇತ್ರ

ರಾಜ್ಯವು ಜಾಗತಿಕ ತಂತ್ರಜ್ಞಾನ ಭೂಪಟದಲ್ಲಿ ಪ್ರಾಮುಖ್ಯ ಗಳಿಸಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ರಫ್ತಿನ ಶೇ. 30 ಕ್ಕೂ ಹೆಚ್ಚು ಪಾಲು ಕರ್ನಾಟಕ ರಾಜ್ಯದ್ದಾಗಿದೆ. ಏಳು ಸಾವಿರಕ್ಕೂ ಹೆಚ್ಚು ಸ್ಟಾರ್ಟಪ್ ಗಳ ತವರೂರಾಗಿರುವ ಬೆಂಗಳೂರು ದೇಶದ ಸ್ಟಾರ್ಟಪ್ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳು ರಾಜ್ಯದ ಆರ್ಥಿಕತೆಗೆ ಬಹು ಮಹತ್ವದ ಕೊಡುಗೆ ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ಈ ವಲಯಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರ ಉತ್ಸುಕವಾಗಿದೆ. ಬೆಂಗಳೂರಿನಾಚೆಗೆ ಐಟಿ/ ಬಿಟಿ ಉದ್ಯಮಗಳ ಬೆಳವಣಿಗೆಗೆ ರಾಜ್ಯ ಸರ್ಕಾರ ಆದ್ಯತೆ ನೀಡಲಿದೆ.

ಕರ್ನಾಟಕ ಇಂಧನ ಸ್ವಾವಲಂಬಿ ರಾಜ್ಯವಾಗಿರುವುದು ಹೆಮ್ಮೆಯ ಸಂಗತಿ. ಇದಕ್ಕೆ ನಾನು 2008 ರಲ್ಲಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮುನ್ನುಡಿ ಬರೆಯಲಾಯಿತು ಎಂಬುದನ್ನು ಸ್ಮರಿಸಬಯಸುತ್ತೇನೆ. ಮುಂದಿನ ದಿನಗಳಲ್ಲಿಯೂ ವಿದ್ಯುತ್ ಉತ್ಪಾದನೆಯಲ್ಲಿ ಅಗ್ರಪಂಕ್ತಿಯನ್ನು ಕಾಯ್ದುಕೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಕೈಗಾರಿಕೋದ್ಯಮಗಳಿಗೆ, ಕೃಷಿಗೆ ಅನಿರ್ಬಂಧಿತ ವಿದ್ಯುತ್ ಒದಗಿಸುವ ನಿಟ್ಟಿನಲ್ಲಿ ಶ್ರಮಿಸಲಾಗುವುದು.

## ಶಿಕ್ಷಣ ಕ್ಷೇತ್ರ

ಶಿಕ್ಷಣ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಅದರಲ್ಲೂ ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಣೆಗೆ ಸರ್ಕಾರಗಳು ಪ್ರಯತ್ನ ನಡೆಸುತ್ತಲೇ ಇವೆ. ಎಲ್ಲ ವರ್ಗದ ಜನರಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ಸರ್ಕಾರ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ. ಸರ್ಕಾರಿ ಶಾಲೆಗಳನ್ನು ಜನರು ನಮ್ಮ ಶಾಲೆ ಎಂದು ಅಭಿಮಾನದಿಂದ ಸ್ವೀಕರಿಸುವಂತಾಗಬೇಕು ಎನ್ನುವುದು ನನ್ನ ಆಶಯ. ಪೋಷಕರ ಸಹಭಾಗಿತ್ವ ಇದ್ದಾಗಲೇ ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ಬಲ ಬರುವುದು ಎಂಬುದನ್ನು ಬಲವಾಗಿ ನಂಬಿದ್ದೇನೆ. ಅಲ್ಲದೆ ಉನ್ನತ ಶಿಕ್ಷಣ ವಲಯದ ಗುಣಮಟ್ಟ ವೃದ್ಧಿಗೆ ಹಾಗೂ ಉದ್ಯೋಗ ಗಳಿಸಲು ಪೂರಕವಾದ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಸರ್ಕಾರ ಬದ್ಧವಾಗಿದೆ.

## ದುರ್ಬಲ ವರ್ಗಗಳ ಕಲ್ಯಾಣ

ನಮ್ಮ ಸರ್ಕಾರ ದುರ್ಬಲ ವರ್ಗದವರಿಗೂ ಸ್ವಾಭಿಮಾನದ ಬದುಕು ಕಟ್ಟಿಕೊಡುವ ಮಹದಾಶಯ ಹೊಂದಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಅಲ್ಪಸಂಖ್ಯಾತರು, ಮಹಿಳೆಯರು, ಮಕ್ಕಳು, ವಿಕಲಚೇತನರು, ಹಿರಿಯ ನಾಗರಿಕರು- ಎಲ್ಲರಿಗೂ ಸುರಕ್ಷೆಯ ಭಾವ ಮೂಡಿಸುವುದರೊಂದಿಗೆ ಗೌರವಯುತ ಬದುಕು ನಡೆಸಲು ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ರೂಪಿಸಲಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಪ್ರಾಮುಖ್ಯತೆ ನೀಡಲಿದೆ. ಅವರಿಗೆ

ಎಲ್ಲ ಅಗತ್ಯ ಸೌಲಭ್ಯಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ಯೋಜನೆಗಳ ಸೌಲಭ್ಯಗಳು ಅರ್ಹರನ್ನು ತಲುಪುವಂತೆ ಕ್ರಮ ವಹಿಸಲಾಗುವುದು.

ಸರ್ಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಆಡಳಿತ ಯಂತ್ರ ಸಕ್ರಿಯವಾಗಿರಬೇಕಾದದ್ದು ಅತಿ ಅಗತ್ಯ. ಇದಕ್ಕಾಗಿ ಆಡಳಿತ ಯಂತ್ರ ಚುರುಕುಗೊಳಿಸಲು ನಾನು ಪ್ರಮಾಣ ವಚನ ಸ್ವೀಕರಿಸಿದ ದಿನದಂದೇ ಪಣತೊಟ್ಟಿದ್ದೇನೆ. ಅಂದೇ ಸಂಜೆ ಹಿರಿಯ ಅಧಿಕಾರಿಗಳ ಸಭೆ ಕರೆದು, ಜಿಲ್ಲೆಗಳಲ್ಲಿ ಪ್ರವಾಸ ನಡೆಸಿ, ಜನರ ಸಂಕಷ್ಟವನ್ನು ಅರಿತು, ಬಗೆಹರಿಸುವಂತೆ ಸೂಚಿಸಿದ್ದೇನೆ.

ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ, ಅಪರಾಧ ನಿಯಂತ್ರಣ, ಶಾಂತಿ ಸುವ್ಯವಸ್ಥೆ ಕಾಪಾಡಲು ಆದ್ಯತೆ ನೀಡುವಂತೆ ಆದೇಶ ನೀಡಿದ್ದೇನೆ.

ಯಾರೂ ದೂರು–ದುಮ್ಮಾನಗಳೊಂದಿಗೆ ರಾಜಧಾನಿಗೆ ಬರುವ ಪರಿಸ್ಥಿತಿ ಒದಗಬಾರದು. ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲಿಯೇ ಜನರ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದೇನೆ.

ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಮೂರು ವಾರವಷ್ಟೇ ಆಗಿದೆ. ರಾಜ್ಯ ಬರ ಹಾಗೂ ಭಾರೀ ಪ್ರವಾಹದಿಂದ ತತ್ತರಿಸಿದೆ. ನಾವು, ನೀವೆಲ್ಲರೂ ಜೊತೆಗೂಡಿ ಸಂತ್ರಸ್ತರ ನೆರವಿಗೆ ನಿಲ್ಲೋಣ.

ಅಶನ, ವಸನ, ವಸತಿಯ ಜೊತೆಗೆ ಉತ್ತಮ ಶಿಕ್ಷಣ, ಆರೋಗ್ಯ, ಮಹಿಳೆಯರು, ವಿಕಲಚೇತನರು, ದುರ್ಬಲರ ಸಬಲೀಕರಣ, ಸುರಕ್ಷತೆ, ಸುಭಿಕ್ಷತೆ ನಮ್ಮ ಸರ್ಕಾರದ ಇತರ ಆದ್ಯತೆಗಳಾಗಿವೆ. ಈ ಯೋಜನೆ ಮತ್ತು ಕಾರ್ಯಕ್ರಮಗಳು ನಿಮ್ಮ ಸಹಕಾರವಿಲ್ಲದೆ ಯಶಸ್ವಿಯಾಗದು. ಆದ್ದರಿಂದ ನಿಮಗಾಗಿ ರೂಪಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ನಿಮ್ಮ ಪಾತ್ರವೂ ಪ್ರಮುಖವಾದುದು ಎಂದು ಪುನರಪಿ ಹೇಳ ಬಯಸುತ್ತೇನೆ.

## ಭಯೋತ್ಪಾದಕರ ಕಪಿಮುಷ್ಟಿಯಿಂದ ಕಾಶ್ಮೀರದ ಬಿಡುಗಡೆ

ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿ ನಾವು ದೇಶದಲ್ಲಿ ಕಂಡ ಮಹತ್ವದ ಬೆಳವಣಿಗೆಯ ಕುರಿತು ಉಲ್ಲೇಖಿಸಲೇ ಬೇಕಾಗಿದೆ.

ಭಾರತದ ಕಿರೀಟ ಪ್ರಾಯ ರಾಜ್ಯ ಕಾಶ್ಮೀರ. ಕಾಶ್ಯಪರ ಮೂಲ ನೆಲೆಯಾದ ಕಾಶ್ಮೀರದಲ್ಲಿ ಕಳೆದ ಏಳು ದಶಕಗಳಲ್ಲಿ ಆಗಿರುವ ಬದಲಾವಣೆಗಳು ಊಹೆಗೆ ಮೀರಿದವು. ಭಾರತೀಯ ಸಂಸ್ಕೃತಿಯ ತೊಟ್ಟಿಲಾಗಿದ್ದ ಕಾಶ್ಮೀರದಲ್ಲಿ ವೈವಿಧ್ಯತೆಯನ್ನು ಮರೆಮಾಚಿ ಏಕಪ್ರಕಾರ ಸಂಸ್ಕೃತಿಯನ್ನು ಬಲವಂತಾಗಿ ಹೇರಿ, ಅಲ್ಲಿನ ಮೂಲ ನಿವಾಸಿಗಳನ್ನು ಮೂಲೋತ್ಪಾಟನೆ ಮಾಡಲಾಗಿತ್ತು.

ಮೂರು ಜಿಲ್ಲೆಗಳು ರಾಷ್ಟ್ರ ವಿರೋಧಿ, ಭಯೋತ್ಪಾದಕ ಸಂಘಟನೆಗಳ ಕಪಿಮುಷ್ಟಿಯಲ್ಲಿ ಸಿಲುಕಿದ್ದವು, ಶಾಂತಿ ಕನಸಿನ ಮಾತಾಗಿತ್ತು. ನಾಗರಿಕರ ರಕ್ಷಣೆಯ ಕರ್ತವ್ಯದಲ್ಲಿ ನಿರತರಾಗಿದ್ದ ಸೈನಿಕರ ಮೇಲೆ ನಿರಂತರ ಕಲ್ಲುಗಳ ಸುರಿಮಳೆ ಆಗುತ್ತಿತ್ತು. ಕಾಶ್ಮೀರದ ಆರ್ಥಿಕ ಸ್ಥಿತಿ ಅಧೋಗತಿಗಿಳಿದಿತ್ತು. ನೆರೆ ರಾಷ್ಟ್ರದ ಕುಮ್ಮಕ್ಕಿನಿಂದ ಭಾರತ ರಾಷ್ಟ್ರದ ತ್ರಿವರ್ಣಧ್ವಜ ಹಾರುವ ಬದಲು ನೆರೆಯ ರಾಷ್ಟ್ರದ ಧ್ವಜ ಅಲ್ಲಲ್ಲಿ ಹಾರಾಡುತ್ತಿತ್ತು. ಇಂತಹ ಅಕ್ಷಮ್ಯ ಅಪರಾಧಗಳಿಗೆ ಇತಿಶ್ರೀ ಹಾಡುವುದರಲ್ಲಿ ಸನ್ಮಾನ್ಯ ಪ್ರಧಾನಿ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಐತಿಹಾಸಿಕ ನಿರ್ಣಯ ಕೈಗೊಂಡಿದ್ದಾರೆ.

ತಾಯಿ ಎದೆ ಹಾಲು ಕುಡಿದ ಗಂಡಸರು ಯಾರಾದರೂ ಇದ್ದರೆ ಶ್ರೀನಗರದ ಲಾಲ್‌ಚೌಕದಲ್ಲಿ ತ್ರಿವರ್ಣಧ್ವಜವನ್ನು ಹಾರಿಸಲಿ ಎಂದು ಉಗ್ರಗಾಮಿಗಳು ಬೆದರಿಕೆ ಒಡ್ಡಿದ ಸಂದರ್ಭದಲ್ಲಿ ಅಂದಿನ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಮುರುಳಿಮನೋಹರ್ ಜೋಷಿಯವರ ನೇತೃತ್ವದಲ್ಲಿ ತ್ರಿವರ್ಣಧ್ವಜ ಹಾರಿಸಿ ಶೌರ್ಯ ಮೆರೆದ ಸನ್ನಿವೇಶ ನನ್ನ ಸ್ಮೃತಿಪಟಲದಲ್ಲಿ ಅಚ್ಚೊತ್ತಿದೆ.

ಸಂವಿಧಾನದ 370ನೇ ವಿಧಿಯ ಸೇರ್ಪಡೆಗೆ ಸ್ವತಃ ಡಾ. ಬಿ.ಆರ್. ಅಂಬೇಡ್ಕರ್ ಅವರೇ ವಿರೋಧ ವ್ಯಕ್ತಪಡಿಸಿದ್ದರು. ದೇಶದ ಅಖಂಡತೆಗೆ ಇದರಿಂದ ಧಕ್ಕೆಯಾಗುವುದು ಎಂದು ಅವರು ಭಾವಿಸಿದ್ದರು.

ಪ್ರಧಾನಿ ಮೋದಿ ಅವರ ಸರ್ಕಾರ ಸಂವಿಧಾನದ 370ನೇ ವಿಧಿ ಮತ್ತು 35ಎ ಕಲಂ ರದ್ದು ಮಾಡಿ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ಗಳನ್ನು ಎರಡು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳನ್ನಾಗಿ ರೂಪಿಸಿದೆ. ಇದಕ್ಕೆ ರಾಷ್ಟ್ರಪತಿಗಳು ಒಪ್ಪಿಗೆಯ ಮುದ್ರೆ ಒತ್ತಿದ್ದಾರೆ. ಇದರಿಂದಾಗಿ ಈ ರಾಜ್ಯದ ಸಮಗ್ರ ಅಭಿವೃದ್ಧಿಯಾಗಿ ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳಲಿದೆ.

ನೆರೆ ರಾಷ್ಟ್ರದ ಚಿತಾವಣೆ, ಪಿತೂರಿ ಮತ್ತು ವಿಧ್ವಂಸಕ ಕೃತ್ಯಗಳಿಗೆ ಇನ್ನು ಅವಕಾಶವಿಲ್ಲ. ಭಯೋತ್ಪಾದಕರ ರೌದ್ರಾವತಾರವನ್ನು ಕೊನೆಗಾಣಿಸಲಾಗಿದೆ. ಶಾಂತಿ ಸುವ್ಯವಸ್ಥೆ ಇಲ್ಲಿ ಮನೆ ಮಾಡಲಿದೆ. ನಾಗರಿಕರು ನೆಮ್ಮದಿಯಿಂದ ಬದುಕಬಹುದಾಗಿದೆ. ಈವರೆಗೆ ಮರಿಚೀಕೆಯಾಗಿದ್ದ ಆರ್ಥಿಕ ಅಭಿವೃದ್ಧಿ ನಿಜವಾಗಲಿದೆ. ಮೂಲನಿವಾಸಿ ಪಂಡಿತರ ಕುಟುಂಬಗಳು ಇನ್ನು ಮುಂದೆ ನಿರಾಶ್ರಿತರಾಗಿ ಬಾಳಬೇಕಿಲ್ಲ. ತಮ್ಮ ಸ್ವಂತ ನೆಲೆಗಳಿಗೆ ಹಿಂತಿರುಗಿ ಸ್ವಾಭಿಮಾನದ ಬದುಕುನ್ನು ಕಟ್ಟಿಕೊಳ್ಳಬಹುದಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರ ಈ ದಿಟ್ಟ ನಿರ್ಧಾರಕ್ಕೆ ರಾಷ್ಟ್ರ ಮತ್ತು ವಿಶ್ವಾದಾದ್ಯಂತ ಸ್ವಾಗತ ದೊರೆತಿದೆ. ಈ ಚರಿತ್ರಾರ್ಹ ನಿರ್ಧಾರದಿಂದ ಭಾರತೀಯ ಇತಿಹಾಸದಲ್ಲಿ ನರೇಂದ್ರ ಮೋದಿಯವರ ಹೆಸರು ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ದಿವಂಗತ ಶ್ಯಾಮ್ ಪ್ರಸಾದ್ ಮುಖರ್ಜಿ, ಪಂಡಿತ್ ದೀನದಯಾಳ್ ಉಪಾಧ್ಯಾಯ, ಅಟಲ್ ಬಿಹಾರಿ ವಾಜಪೇಯಿ ಅವರಂತಹ ಧೀಮಂತರ ಕನಸು ಮತ್ತು ಅಸಂಖ್ಯಾತ ರಾಷ್ಟ್ರಾಭಿಮಾನಿಗಳ ಆಸೆ ಇಂದು ನೆರವೇರಿದೆ. ಅಖಂಡ ಭಾರತದ ಪರಿಕಲ್ಪನೆ ಪರಿಪೂರ್ಣವಾದಂತಾಗಿದೆ. ಈ ಅಖಂಡ ಭಾರತದ ಸಮಗ್ರ ಅಭಿವೃದ್ಧಿಗೆ ನಾವೂ ನಮ್ಮ ಅಳಿಲ ಸೇವೆ ಮಾಡಬೇಕಾದುದು ನಮ್ಮ ಕರ್ತವ್ಯ. ನಾವು ಇಡುವ ಸಣ್ಣ ಸಣ್ಣ ಹೆಜ್ಜೆಗಳೇ ನಮ್ಮನ್ನು ಗುರಿಯತ್ತ ಕರೆದೊಯ್ಯುತ್ತವೆ.

**ಬಂಧುಗಳೆ,**

ನಿಮ್ಮ ಸೇವೆಗೆ ಮತ್ತೊಂದು ಅವಕಾಶ ನನಗೆ ದೊರೆತಿದೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ನುಡಿಯಂತೆ ನಡೆದು ನನಗೆ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಸಮೃದ್ಧ ಕರ್ನಾಟಕ ನಿರ್ಮಿಸುವ ಕನಸು ನನ್ನದು. ಪ್ರತಿಯೊಬ್ಬ ಕನ್ನಡಿಗ ನೆಮ್ಮದಿ, ಸ್ವಾಭಿಮಾನದಿಂದ ಬದುಕುವಂತಾಗಬೇಕು ಎನ್ನುವುದು ನನ್ನ ಆಶಯ.

'ಸಾಧನೆಯೇ ಮಾತಾಗಬೇಕೆ ಹೊರತು, ಮಾತುಗಳೇ ಸಾಧನೆಯಾಗಬಾರದು' ಎನ್ನುವುದು ನನ್ನ ನಂಬಿಕೆ. ಆದ್ದರಿಂದ ನಮ್ಮ ಕರ್ನಾಟಕದ ಅಭಿವೃದ್ಧಿಯ ಮೂಲಕ ದೇಶದ ಬೆಳವಣಿಗೆಗೆ ನಮ್ಮ ಕಿರು ಕಾಣಿಕೆ ನೀಡೋಣ. ಬನ್ನಿ, ನಾವೆಲ್ಲರೂ ಜೊತೆಯಾಗಿ ನಾಡಿನ ಅಭಿವೃದ್ಧಿಯಲ್ಲಿ ಕೈಜೋಡಿಸೋಣ. ಒಗ್ಗಟ್ಟಿನ ಬಲದಿಂದ ಗುರಿ ಸಾಧಿಸೋಣ.

ಮತ್ತೊಮ್ಮೆ ನಿಮಗೆಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳನ್ನು ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜೈ ಹಿಂದ್ ಜೈ ಕರ್ನಾಟಕ

* * * * * * *

**My dear citizens of the state ,**

I extend warm greetings to all of you on this auspicious occasion of 73rd Independence Day.

As Mahatma Gandhi said, ***"Freedom is never dear at any price. It is the breath of life."***

I am fortunate to address the state on Independence Day during the year of 150th birth anniversary of the Father of the Nation, Mahatma Gandhi. We are taking giant strides in realizing Gandhiji's dream of building Ram Rajya. Our Government believes that development is the mantra of administration.

Thousands of people have laid down their lives for the cause of Independence. Today, we are enjoying the fruits of their sacrifice. It is our responsibility to save and further this freedom that was achieved with the sacrifice of our freedom fighters. Let us take a pledge in this regard on this occasion of Independence Day.

**NATURE'S FURY, PRIORITIY FOR RELIEF**

Karnataka is caught between two extremes of drought and floods. My Government is ready to face situations arising out of both extremes. Soon after I took over as Chief Minister, I had convened a meeting of Deputy Commissioners of all districts and had issued them guidelines to tackle drought that was prevailing in the state then.

The state is witnessing the nature's fury that was not seen in the past 45 years. More than half of the state is flooded. As many as 103 talukas in 22 districts of Karnataka are submerged. Amidst this, at least 5 districts haven't received enough rain, creating a drought-like situation. The flood situation that has beset Karnataka is because of discharge of water from reservoirs in neighbouring states along with sudden spell of monsoon rain in the state. It's a matter of abundant significance that the rain-distribution pattern is uneven, and some areas are reeling under rain deficiency. So far, 61 people have lost their lives in floods. Compensation of Rs 5 lakh to the family of the dead is being disbursed within 48 hours.

Almost 6.97 lakh people have been evacuated to safer places. The state has seen deaths of 859 animals, and more than 51,460 animals have been rescued. We have opened a total of 1224 relief centres where food, clothing, medicines and other essential materials have been provided. 3,96,617 people have been given shelter in these relief centres.

The challenges brought forth by sudden and convulsing flood waters are many. The worst affected are members of the farming community. About 4.69 lakh hectares of land have been lost to floods or landslide incidents. More than 58,620 houses are damaged. Thousands of people have lost their homes, are in the grip of a crisis.

Soon after the flood situation broke out, I held extensive meetings with bureaucrats. I have been conducting both on-the-spot and aerial surveys of the affected areas and ordered relief without losing time. I have taken quick steps to provide relief to the affected people after extensively touring Belagavi, Bagalkot, Vijayapura,

Raichur, Yadgir, Dakshina Kannada, Shivamogga, Mysuru and Gadag districts.

Our officers and employees, Legislators, MPs, NGOs and other welfare organisations have come to the rescue of the affected people. Opposition leaders, too, have voiced their concern, besides co-operating with the Government on its relief operations.

I have announced immediate relief of Rs 10,000 to those who have lost their homes, Rs 5 lakh in compensation and Rs 1 lakh to repair and rebuild damaged houses.

Life has been very difficult for slum dwellers in flood affected urban areas. Therefore Government will take steps to build houses and provide basic amenities such as roads, UGDs, drinking water, toilets and other facilities.

**CENTRE'S ASSISTANCE**

During my recent visit to New Delhi, I called on the Hon'ble Prime Minister and his cabinet colleagues seeking necessary assistance at the earliest. The Union Government immediately acted upon my request and sent in National Disaster Response Force personnel, besides deploying army, helicopters and rescue boats in our efforts to shift the affected people to safety.

Minister of Finance Smt Nirmala Sitharaman, Minister of Home Affairs Shree Amit Shah, Minister of Chemicals and Fertilisers Shree DV Sadananda Gowda, Minister of Coal Shree Pralhad Joshi and Minister of state for Railways Shree Suresh Angadi along with MPs

have personally visited the flood-affected areas and promised to bring in more assistance from the Union Government.

The natural disaster has left a trail of death and destruction, destroying properties and assets worth thousands of crores of rupees. The Karnataka Government will take all measures possible to repair the houses destroyed in the flood if they could be repaired or help its owners build them afresh if they cannot be repaired. We are still assessing the extent of damage. Once we get the final estimate of the losses suffered in the floods and rain, we will seek more assistance from the Union Government.

I have asked the teams of legislators and parliamentarians, which I had formed, to expedite relief operations after reviewing the situation prevailing on the ground. They have carried out the task likewise. Teams headed by Additional chief secretary-level officers have taken charge of the flood-affected districts assigned to them. I can declare with a clear conscience that my Government has left no stone unturned in rushing to the rescue of the people stuck or affected or stranded in the impact of sudden floods in the state.

Many fishermen have lost their houses to sea erosion in the coastal districts. It's well-acknowledged that the Union Government has come to the aid of the Karnataka Government. Similarly, the Karnataka Government has stood by the affected fishermen.

**KARNATAKA ON THE PATH OF PROGRESS**

Karnataka is an important state among the progressive states in the country. Its rich cultural and literary history is more than 2,000

years old. Karnataka enjoys the prime place in India, thanks to its endless natural resources and unmatched human talent.

We are committed to building a wealthy and healthy Karnataka, while keeping the lead. Our Government has adopted development as its mantra. The decisions taken at the very first cabinet meeting after I took over as the Chief Minister of Karnataka are clear evidence in this regard.

There has been an increasing clamour that the employment representations of Kannadigas in jobs in Karnataka are on the decline. It is our established and stated stand that Kannadigas must get a lion's share in jobs available in Karnataka. The Government's policy echoes this view. On this occasion, I would like to reiterate and declare that this Government respects the sentiments of the people of this land. We are committed to ensuring that the self-respect and job opportunities of Kannadigas are never compromised or come under threat. At the same time, in the federal structure, we are ready to offer equal opportunities to all those who come to Karnataka seeking employment opportunities.

**MODEL KANNADIGAS**

I would like to call upon all those who have been migrating to Karnataka from outside to adapt to the Kannada culture, lifestyle and the language without compromising or weakening their identity whatsoever. In this regard, Kannadigas lead by example. Kannadigas — no matter where they go and settle — blend seamlessly with the country or town of adoption. This is worth emulating.

## FARMERS- THE FIRST PRIORITY

**Dear friends,**

The first priority is to accord protection to farmers. And this remains our first and foremost commitment. It's our Government's intent and endeavour to instil farmers with confidence and help them face the vagaries of markets and the fury of nature, be it long spells of drought or flash floods which we are witnessing now.

For this very reason of protecting the farmers, the day I took charge as Chief Minister of Karnataka, I announced that state Government will hand out Rs 4,000 (in two instalments) in addition to Rs 6,000 that the Union Government gives under the Pradhan Mantri Kisan Samman Nidhi Yojna to the beneficiaries from the farming community.

Besides, I took quick measures to ensure that the eligible beneficiaries get the first instalment of Rs 2,000 directly in their bank accounts. The Government purchases the green fodder that farmers grow. We've increased the rate of green fodder from Rs 3,000 per ton to Rs 4,000 per ton.

## LOAN WAIVER FOR WEAVERS AND FISHERMEN

Also, I have made very earnest attempts to see that the distress in the lives of weavers and fishermen is mitigated to a large extent.

Weavers in Karnataka were facing severe deficit of working capital to carry out their production activities. Bad market conditions made their condition worse. Realising the fact that the weaving community needs financial help from the Government to become financially independent, I have announced waiver of loan up to Rs 1 lakh availed from co-operative banks and co-operative societies. This is going to cost us Rs 98.29 crore and this waiver scheme will benefit no less than 29,621 weavers.

Similarly, the Government has decided to come to the rescue of fishermen in the three coastal districts of Karnataka, and their loans will be waived the way farmers' outstanding dues were written off. I have issued an order waiving loans of up to Rs 50,000 availed at an interest of 2% from commercial banks and regional rural banks. This will cost the Government Rs 60.58 crore. This will benefit 23,507 members of the fishing community including women in substantial numbers.

**PRO-PEOPLE GOVERNMENT**

This Government is for the people and their welfare. Keeping this in mind, the Government has been working towards all-round development of the state.

Only 32.3 per cent of Karnataka's agriculture land is under irrigation. I would like to state that my Government will take positive and definitive steps to bring more areas under irrigation.

Horticulture is another area that brings benefits to the farming community and this area contributes 32.45% to the state's agriculture income. Karnataka is one of the foremost states in India with respect

to export of horticultural produces. The Government will take all necessary steps to bring in more structured environment to help the farmers.

The Karnataka Government will offer guidance and support to the farming community to help double their income as envisioned by the Hon'ble Prime Minister Narendra Modi.

Co-operative sector is the backbone of the agriculture economy. In order to strengthen the co-operative edifice, the state Government will play an effective and constructive role in this regard. Some of the measures in this regard are ensuring better price for the produce, prevention of harassment by middlemen and strengthening of online platform so that farmers take their products to the market without any barriers.

The Government is also committed to establishing structured and scientific warehouses for farmers, effective and decisive intervention in case of price crash in its affirmed bid to protect the interest of farming community.

Also, we will accord top-most priority to provide potable drinking water, solid waste management and other basic infrastructure in rural Karnataka too.

Today, urbanization is widespread. It's more imperative than ever to ensure urban areas are provided all basic infrastructures because of the increasing number of immigrants to cities in search of employment and education opportunities. In this respect, Bengaluru and all other cities in Karnataka will get a streamlined approach to development and maintaining basic urban infrastructure that's the need of the hour.

## BOOST TO INDUSTRIES, SKILL DEVELOPMENT AND CREATION OF JOBS

It's one of our priorities to ensure jobs for the deserving ones. We will accord top-most priority locally creating industry-specific talent pool and encouraging youths to undergo skill-development programmes.

Karnataka is among the top states in industrial development. Karnataka has met 98% of the parameters in the ease-of-business, business goals set by the Union Government. The Government will take steps to achieve 100% result in this and create a conducive environment in attracting more investment to the state.

The 2014-19 Industrial policy is set to end in September this year. Keeping in mind the overall and comprehensive growth of the industry sector, the Karnataka Government will soon come out with a new industrial policy that will give booster shot to areas classified as backward and Tier II and III cities so that they attract industrial investment and, consequently, generate more jobs locally.

In the coming days, the Government will extend the "Product Based Industrial Cluster Development Programme" — that's currently under implementation in nine districts of Karnataka — to rest of the state to ensure the overall growth of the state based on the availability of resources and skilled manpower.

I had unveiled the textile policy in 2008, a first of its kind in the entire country. We have had two textile policies. The state Government

will soon launch a new policy for textile and readymade garments industries for the years 2019 to 2024.

**THRUST TO TOURISM**

Tourism is one sector that generates jobs both directly and indirectly. We have set up a task force on tourism under the chairmanship of Smt Sudha Murthy, Chairperson of Infosys Foundation, with the aim of developing tourist places which represent the thousands of years of old culture and heritage of our state. My Government will work towards a sustainable and constructive tourism development programme.

**INFORMATION TECHNOLOGY**

Karnataka has gained prominent place in the global technology map. Karnataka contributes more than 30% to India's IT exports. Bengaluru, home to more than 7,000 start-ups, has earned itself the pride of being the startup capital of India. Information technology and biotechnology sectors have significantly contributed to the state's economy. The Government is keen to offer much more encouragement to these sectors. The state Government is all set to take IT and BT beyond the boundaries of tech capital Bengaluru.

It's a matter of pride that Karnataka has achieved energy self-reliance. I would like to recall that this initiative gained momentum in 2008 when I was the Chief Minister of the state. In the coming days too, we will work towards maintaining the lead in energy sector and help to create unstinted power supply to agriculture sector and industries.

## EDUCATION

The Government has been making efforts to improve the quality of education and that of Government schools in particular. The Government has been making all efforts to see that people across all categories and classes must have access to quality education. It's my earnest desire that the people of this state must wholeheartedly accept the Government schools as their own. I strongly believe that Government schools will achieve better results and find more acceptance if parents, too, become stakeholders in this exercise. Besides, the Government is committed to evolve a higher education system that helps get jobs as also further excellence in higher education.

## WLEFARE OF THE VULNERABLE

Our Government is strongly committed to ensuring a life of self-respect for the backward and downtrodden sections of society. The Government will soon implement programmes that will ensure dignified living among all sections — SCs, STs, minorities, women, special and challenged children, the disabled and senior citizens. We will take measures to ensure that the benefits reach the deserving beneficiaries.

Our Government will give thrust to the comprehensive development of SC, ST, Backward Classes and Minority Communities. We are committed to provide all necessary facilities to these oppressed communities and necessary steps will be taken to ensure that the facilities reach out to the needy.

I am of the firm opinion that the Government must be proactive if it has to ensure effective implementation of welfare programmes. I have taken a vow to fast-track the administrative machinery the very minute I took oath as the chief minister of the state. In the evening after the swearing-in, I held a meeting with senior bureaucrats and instructed them to tour the districts to asses and understand the problems faced by the people.

I held a meeting of senior police officers and directed them to prevent crime and maintain peace in the state.

Nobody should rush to Bengaluru with complaints. The grievances must be resolved at the very local level — taluk and district levels.

It is only three weeks since I assumed office. The state is reeling under both drought and floods. Let's stand together in this hour of crisis and bail out the affected people.

Besides ensuring home and hearth for the affected people, the Government is committed to good education, healthcare, safety and empowerment of women and the disabled and the overall development of the state. The plans and programmes of the Government will not succeed without your active participation and co-operation. I would like to reiterate that your role and participation is equally important in effectively implementing the plans and development programmes for you.

## KASHMIR OUT OF TERROR REIGN

I must make a mention of a very significant development from this forum on Independence Day.

The state of Kashmir is India's crown. It boggles one's imagination on what has been happening in the past seven decades in Kashmir, the home of the Kashyapas. What was a cradle of Indian culture had been given a uni-dimensional cultural narrative, and the native settlers had been driven out.

Anti-national and terrorist forces had held hostage the region's three districts. Peace was out of reach. The soldiers who were in the line of duty to ensure citizen safety were rained with stones day in and day out. Kashmir's economy had touched a new low. Thanks to machinations of a neighbouring country, the flag of the neighbouring country, instead of the Tricolour used to flutter in stray places. Hon'ble Prime Minister Narendra Modi has taken a historic decision to end this terror reign in the Valley.

My memory is still vivid of the incident where Shri Murali Manohar Joshi, the then national president of BJP unfurled the tricolor in Lal Chowk in Shrinagar, defying challenge of terrorists.

Dr BR Ambedkar, who sculpted the Constitution of India, had expressed opposition to include Article 370 in the Constitution. He was of the opinion that it could threaten the very unity of the nation. Now, Articles 370 and 35A have been voided. The state has now been bifurcated into two Union territories —one is Jammu and Kashmir, and the other is Ladakh. The President of India has approved the

legislation. With this, the state will now develop in all respects and join the mainstream.

No more space for our neighbour to stoke trouble in the Valley. It's the end of terror dance. Peace and order will soon strike root. Citizens will live without worries. The state's development — more a chimera than a reality — will soon be visible, tangible. The Pandits who had to quit the state no longer feel they are refugees in their own land. They can return to their land with confidence and pride, and rebuild their lives.

Prime Minister Shri Narendra Modi's bold decision has been welcomed by both the country and the world. Shri Modiji has etched a name for himself in years to come. With this, the dream of Shyama Prasad Mukherjee, Deen Dayal Upadhyaya, Atal Bihari Vajpayee and lakhs of Indians is now a reality. With this, the goal of Akhand Bharat has been achieved. It's our duty to do our bit for the nation's all-round development. Whatever tiny steps we take will be journey towards lofty goals.

**Friends,**

I have got another opportunity to serve you. As social reformer Basavanna said, ***"work is worship" (Kayakave Kailasa),*** I would like to fully use this opportunity to build a progressive and affluent Karnataka.

By developing Karnataka, we will also develop the country. Let's join hands in building the nation and in its development. Let's achieve this with unity.

I once again extend my warm independence day greetings to the people of the State and conclude my speech.

**Jai Hind Jai Karnataka**

* * * * * *